O.S. 162/2016
ಪಿ ಡಬ್ಲೂ 3

**<u>ಸಾಕ್ಷಿಯನ್ನು ದಿನಾಂಕಃ 30-08-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ಪರ ವಕೀಲರವರಿಂದಃ</u>**

ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಲು ಮಾಹಿತಿಯನ್ನು ವಾದಿ ನೀಡಿರುವರು. ವಾದಿ ಹಾಕಿರುವ ಕೇಸು ಹಾಗೂ ಹಾಜರುಪಡಿಸಿರುವ ಮಾಹಿತಿ ನನ್ನ ತಂದೆಗೆ ಇರುವುದು ನಾನು ತಿಳಿದುಕೊಂಡಿರುವುದಿಲ್ಲ. ನಾನು, ವಾದಿ, 1 ನೇ ಪ್ರತಿವಾದಿ ಹಾಗೂ ಆತನ ಮಗ ರವೀಂದ್ರ ಹಾಗೂ ನಾಗರಾಜಪ್ಪ ಎಲ್ಲರೂ ವಿಶ್ವಾಸಿಕರು ಎಂದರೆ ಸರಿ. ಅವರೆಲ್ಲರೂ ಕೃಷಿ ಅಥವಾ ಇನ್ನಾವುದೇ ವ್ಯವಹಾರವನ್ನು ಹರಪನಹಳ್ಳಿಯಲ್ಲಿ ಮಾತ್ರ ಮಾಡುವರು ದಾವಣಗೆರೆಯಲ್ಲಿ ಮಾಡುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಜೀವಿತ ಕಾಲದಲ್ಲಿ ಯಾವುದೇ ಖರೀದಿ ವ್ಯವಹಾರ ಮಾಡಿರುವುದಿಲ್ಲ. ನನ್ನ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ. ನನ್ನ ತಂದೆ ಯಾವ ರೀತಿ ಸಹಿ ಮಾಡುವರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು 60 ಸೆಂಟ್ಸ್ ಇರುವುದು. ನಾನು 1 ನೇ ಪ್ರತಿವಾದಿ, ವಾದಿ ಹಾಗೂ 1 ನೇ ಪ್ರತಿವಾದಿಯ ಮಗ ರವೀಂದ್ರ ವಿಶ್ವಾಸದಲ್ಲಿರುವ ಕಾರಣ 2 ಮತ್ತು 3 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ನನಗೆ ಈ ಕೇಸಿನ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹಿತ ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಗಂಗಮ್ಮ, ಪಶ್ಚಿಮಕ್ಕೆ ಕಮ್ಮಾರ ಗಂಗಮ್ಮ ಇವರ ಜಾಗ, ಉತ್ತರಕ್ಕೆ ನಿಂಗಪ್ಪನ ಜಾಗ ಹಾಗೂ ದಕ್ಷಿಣಕ್ಕೆ ನಾಗಲಿಂಗಪ್ಪನ ಜಾಗ ಇರುವುದು.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

30.08.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**